ಮದುವೆ–ಮುಂಜಿಗಳಂತಹ ಶುಭ ಸಮಾರಂಭಗಳಲ್ಲಿ ತೆಂಗಿನಗರಿ, ಅಡಿಕೆ ಮರದ ಸೋಗೆಗಳನ್ನು ಬಳಸಿ ಚಪ್ಪರ ಹಾಕುವುದು ಹಳೆಯ ಸಂಪ್ರದಾಯ. ಈ ಚಪ್ಪರದ ಒಳಭಾಗಕ್ಕೆ ಸೀರೆಯಿಂದ ತಯಾರಿಸಿದ ಮೇಲ್ಗಟ್ಟಿನ ಅಲಂಕಾರಿಕ ಚಿತ್ತಾರ ಸಮಾರಂಭದ ಸಂಭ್ರಮಕ್ಕೆ ಹೆಚ್ಚಿನ ಮೆರುಗು ನೀಡುತ್ತಿತ್ತು. ಆದರೆ ಈ ಕಲಾ ಚಿತ್ತಾರ ಈಗ ಮರೆಯಾಗಿದೆ.

■ ಚಿತ್ರ ಬರಹ: **ಗಣಪತಿ ಹಾಸ್ಪುರ**





# ಮದುವೆಯ ಸಂಭ್ರಮಕ್ಕೆ ಮೇಲ್ಗಟ್ಟಿನ ಶೃಂಗಾರ

ಮನುಷ್ಯನ ಜೀವನದಲ್ಲಿ ಮದುವೆ ಎನ್ನುವುದು ವಿಶಿಷ್ಠವಾದ ಘಟ್ಟ. ಇದೊಂದು ಪವಿತ್ರವಾದ, ಸಂಸ್ಕಾರಯುತವಾಗಿ ನಡೆಯುವ ಧಾರ್ಮಿಕ ಕಾರ್ಯವೂ ಹೌದು. ಪ್ರತಿಯೊಂದು ಧರ್ಮ, ಜಾತಿ, ಪಂಗಡಗಳಲ್ಲಿ ನಡೆಯುವ ಮದುವೆ ಸಂಭ್ರಮ, ಆಚರಣೆಯ ವಿಧಿ ವಿಧಾನಗಳು ಭಿನ್ನ ಭಿನ್ನವಾಗಿದೆ. ಅಷ್ಟೇ ವೈವಿಧ್ಯ ವೈಶಿಷ್ಟ್ಯವನ್ನು ಸಹಾ ಹೊಂದಿದೆ.

ಅದರಲ್ಲಿಯೂ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಯಲ್ಲಾಪುರ ತಾಲೂಕಿನಲ್ಲಿ ನಡೆಯುವ ವಿವಾಹದ ಸಂಭ್ರಮ ಬಹಳ ವಿಶಿಷ್ಟ, ವೈವಿಧ್ಯಗಳಿಂದಲೂ ಕೂಡಿದೆ. ಈ ಭಾಗದ ಹವ್ಯಕರ ಮನೆಗಳಲ್ಲಿ ನಡೆಯುವ ಮದುವೆಯ ಆಚರಣೆ, ವಿವಾಹದ ಸಂಭ್ರಮಕ್ಕಾಗಿಯೇ ಸಿದ್ಧಪಡಿಸುವ ತೆಂಗಿನ ಮಡ್ಲು ಸೋಗೆಯ ಚಪ್ಪರ; ಬಾಳೆ ಕಂಬದ ಆಕರ್ಷಕ ಮಂಟಪ, ತಳಿರು ತೋರಣಗಳಿಂದ ಸಿದ್ಧವಾದ ಅಲಂಕಾರ, ಚಪ್ಪರದ ಕೆಳಗೆ ಊರಿನವರೇ ಸೇರಿಕೊಂಡು ತಮ್ಮ ಕೈ ಚಳಕದಿಂದ ಸಿದ್ಧಮಾಡುವ ಸೀರೆಯ ಶೃಂಗಾರವೆಲ್ಲಾ ನಿಜಕ್ಕೂ ಅತ್ಯಾಕರ್ಷಕ. ಅದು ಮನಸ್ಸಿಗೂ ಉಲ್ಲಾಸ ನೀಡುತ್ತದೆ.

## ಸೀರೆಯ ಮೆರುಗು!

ಇಲ್ಲಿನ ಚಿತ್ರಗಳನ್ನು ಗಮನಿಸಿ. ಇದ್ಯಾವುದು ರೆಡಿಮೇಡ್ ಆಗಿ ಸಿಗುವ ಅಲಂಕಾರಿಕ ವಸ್ತುಗಳಲ್ಲ. ನೋಡಲು ಅಂದವಾದ, ಸೂಜಿಗಲ್ಲಿನಂತೆ ಆಕರ್ಷಿಸುವ ವಿಧ ವಿಧವಾದ ವಿನ್ಯಾಸ